**<u>ದಿನಾಂಕಃ 28.04.2025 ರಂದು ಸಾಕ್ಷಿಗೆ ಪುನಃ ಪ್ರಮಾಣವಚನ ಬೋಧಿಸಲಾಯಿತು.</u>**

**<u>ಪಾಟಿ ಸವಾಲುಃ</u>** ಪ್ರತಿವಾದಿ ನಂ.1 ಮತ್ತು 2 ರ ಪರ ವಕೀಲರು ಪಾಟಿ ಸವಾಲಿಗೆ ಸಮಯ ಕೋರಿರುತ್ತಾರೆ, ಮನವಿ ತಿರಸ್ಕರಿಸಿ ಪಾಟಿ ಸವಾಲು ಇಲ್ಲ ಅಂತ ತೆಗೆದುಕೊಳ್ಳಲಾಯಿತು.

**<u>ಪಾಟಿ ಸವಾಲುಃ ಪ್ರತಿವಾದಿ ನಂ.3 ರಿಂದ 6 ರ ಪರ ಶ್ರೀ ಎಂ ಆರ್ ಪಿ ವಕೀಲರಿಂದ.</u>**

ನೀವು ಎಲ್ಲಿ ಜನಿಸಿರುತ್ತೀರಿ ಅಂದರೆ ಸಾಕ್ಷಿ ಹುಬ್ಬಳ್ಳಿಯ ಗೋಖಾವಿ ಆಸ್ಪತ್ರೆಯಲ್ಲಿ ಜನಿಸಿರುತ್ತೇನೆ ಎನ್ನುತ್ತಾರೆ. ನಿಮ್ಮ ಜನ್ಮದ ಜಾತಕ ಬರೆಸಿರುತ್ತಾರಾ ಅಂದರೆ ಸಾಕ್ಷಿ ಬರೆಸಿರುತ್ತಾರೆ ಎನ್ನುತ್ತಾರೆ. ಜನ್ಮ ದಿನಾಂಕ ವ್ಯಕ್ತಿಗಳು ಜನಿಸಿದ ಸಂಬಂಧಪಟ್ಟ ಸ್ಥಳೀಯ ಸಂಸ್ಥೆಗಳ ಕಚೇರಿಗಳಲ್ಲಿ ನೋಂದಾವಣಿ ಆಗುತ್ತವೆ ಅಂದರೆ ಸರಿ. ಸ್ಥಳೀಯ ಕಚೇರಿಗಳಿಂದ ನೀಡಿದ ಜನ್ಮ ಪ್ರಮಾಣಪತ್ರವನ್ನು ನೀವು ಪಡೆದಿರುತ್ತೀರಾ ಅಂದರೆ ಸಾಕ್ಷಿ ಈ ಬಗ್ಗೆ ನನ್ನ ತಾಯಿಯನ್ನು ಕೇಳಿ ತಿಳಿದುಕೊಳ್ಳಬೇಕು ಎನ್ನುತ್ತಾರೆ. ನನ್ನ ಜನ್ಮ ದಿನಾಂಕವನ್ನು ವಾದಪತ್ರದಲ್ಲಿ ಬರೆಸಿಲ್ಲ ಅಂದರೆ ಸರಿ. ವಾದಿ ನಂ.2 ಮತ್ತು 4 ರವರು ಸೊರಬ ತಾಲ್ಲೂಕು ದ್ವಾರಹಳ್ಳಿಯಲ್ಲಿ ಜನಿಸಿರುತ್ತಾರೆ ಅಂದರೆ ಸರಿ. ವಾದಿ ನಂ.2 ಮತ್ತು 4 ರವರ ಜನ್ಮ ಪ್ರಮಾಣಪತ್ರವನ್ನು ಹಾಜರುಪಡಿಸಿರುತ್ತೀರಾ ಅಂದರೆ ಸಾಕ್ಷಿ ಹಾಜರುಪಡಿಸಿಲ್ಲ ಎನ್ನುತ್ತಾರೆ. ವಾದಿ ನಂ.2 ಮತ್ತು 4 ರವರ ಜನ್ಮ ಪ್ರಮಾಣಪತ್ರವನ್ನು ತೆಗೆದುಕೊಂಡಿರುತ್ತೀರಾ ಅಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ನಿಪಿ–93 ರಲ್ಲಿ ನಮೂದಿಸಿರುವ ನನ್ನ ಜನ್ಮ ದಿನಾಂಕ ಅಂದಾಜಿನಿಂದ ದಾಖಲಿಸಲಾಗಿದೆ ಅಂದರೆ ಸರಿಯಲ್ಲ. ನನ್ನ ಜನ್ಮ ದಿನಾಂಕ ಅಂದಾಜಿನಿಂದ ಶಾಲೆಗೆ ಸೇರಿಸುವಾಗ ನಮೂದಿಸಿದ ಕಾರಣ ನಾನು ನನ್ನ ಜನನ ಪ್ರಮಾಣಪತ್ರ ಮತ್ತು ಜನ್ಮದ ಜಾತಕ ಹಾಜರುಪಡಿಸಿಲ್ಲ ಅಂದರೆ ಸರಿಯಲ್ಲ. ನಿಪಿ–94 ಮತ್ತು 95 ನ್ನು ನಮಗೆ ಅನುಕೂಲ ಆಗುವ ರೀತಿಯಲ್ಲಿ ಶಾಲೆಯಿಂದ ಬರೆಸಿಕೊಂಡು ಬಂದಿರುತ್ತೇವೆ ಅಂದರೆ ಸರಿಯಲ್ಲ.

**<u>ಪಾಟಿ ಸವಾಲುಃ</u>** ಪ್ರತಿವಾದಿ ನಂ.7(ಬಿ) ಯಿಂದ (ಇ) ರ ಪರ ಶ್ರೀ ಆರ್ ಕೆ ವಕೀಲರು ಪ್ರತಿವಾದಿ ನಂ.3 ರಿಂದ 6 ರ ಪರ ವಕೀಲರು ಮಾಡಿರುವ ಪಾಟಿ ಸವಾಲನ್ನು ಈ ಪ್ರತಿವಾದಿಗಳು ಅಳವಡಿಸಿಕೊಂಡಿರುತ್ತಾರೆ ಎನ್ನುತ್ತಾರೆ.

**ಪಾಟಿ ಸವಾಲುಃ** 8 ನೇ ಪ್ರತಿವಾದಿ ಪರ ಶ್ರೀ ಎಂ ಎನ್ ವಕೀಲರು ಪ್ರತಿವಾದಿ ನಂ.3 ರಿಂದ 6 ರ ಪರ ವಕೀಲರು ಮಾಡಿರುವ ಪಾಟಿ ಸವಾಲನ್ನು ಈ ಪ್ರತಿವಾದಿ ಅಳವಡಿಸಿಕೊಂಡಿರುತ್ತಾರೆ ಎನ್ನುತ್ತಾರೆ.

**ಮರುವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕೃತಗೊಳಿಸಲಾಯಿತು)

ನನ್ನ ಸಮಕ್ಷಮ
ಓ.ಹೇ.ಕೇ.ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ. ದಂಡಾಧಿಕಾರಿಗಳು, ಸೊರಬ.